ನೀನು ಕುಟ್ಟಿ ಗ್ಯಾಂಗ್ ಸೇರಿದ ವಿಚಾರ ತಿಳಿದಿದ್ದೆ. ನಿನ್ನ ನೋಡಿದಾಗ ಗುರುತು ಹಿಡಿದೆ. ನೀನು ಬಾಡಿಗೆ ಮನೆಯಿಂದ ಕೆಲವು ದಿನಗಳು ನಾಪತ್ತೆಯಾಗಿರುತ್ತಿದ್ದಿಯಂತೆ, ಯಾಕೆ?"

"ಅದು ಪಾದಯ್ಯನಿಗೆ ಫೋನು ಮಾಡಲಿಕ್ಕೆ, ನಾನು ದೂರದ ಬೇರೆ ಯಾವುದಾದರೂ ಊರಿಗೆ ಹೋಗಿ ಅಲ್ಲಿಯ ಸಾರ್ವಜನಿಕ ಬೂತಿನಿಂದ ಕರೆ ಮಾಡ್ತಿದ್ದೆ. ಒಂದೊಮ್ಮೆ ಪಾದಯ್ಯನ ಫೋನಿನ ಮೇಲೆ ಬಾಸ್ ನಿಗಾ ಇಟ್ಟರೂ ಸಿಗಬಾರದು ಅಂತ ಉದ್ದೇಶ."

"ನನ್ಗೆ ಬ್ಯಾಂಕ್ ಕಳ್ಳತನ ಮಾಡಿದವನೇ ಇಲ್ಲಿ ಇದ್ದಾನೆ ಅಂತ ಅನುಮಾನವಾಗಿತ್ತು. ನಿನ್ನ ಮನೆಯಲ್ಲಿ ಇದ್ದ ಹಳೆಯ ದಿನಪತ್ರಿಕೆಯಲ್ಲಿ ಇದ್ದಿದ್ದು ಅದೇ ಕಳ್ಳತನದ ಸುದ್ದಿಗಳು. ಆ ಪತ್ರಿಕೆಗಳನ್ನು ನೀನಿನ್ನು ಇರಿಸಿಕೊಂಡಿದ್ದೀಯಾ ಅಂದ್ರೆ ಅದು ನಿನ್ಗೆ ಸಂಬಂಧಿಸಿದ ಸುದ್ದಿ ಅಂತ ಸಾಬೀತಾಯಿತು. ನನ್ನ ಅನುಮಾನ ಗಟ್ಟಿಯಾಯಿತು. ಜೊತೆಗೆ ಅಲ್ಲಿ ಇನ್ನೊಂದು ಕೋಣೆಯ ಮುಚ್ಚಿಗೆಯಲ್ಲಿ ನನಗೆ ಒಂದು ಹಲಗೆ ಕತ್ತರಿಸಿದಂತೆ ಕಂಡು ಬಂತು. ಜಾಗ್ರತೆಯಿಂದ ತುಂಡರಿಸಿ, ಮತ್ತೆ ಗೊತ್ತಾಗದ ಹಾಗೆ ಕೂರಿಸಿಡಲಾಗಿತ್ತು. ಆ ಮುಚ್ಚಿಗೆಯೊಳಗೆ ನೀನು ಹಣ ಬಚ್ಚಿಟ್ಟಿರಬೇಕು ಅಂತ ಯೋಚಿಸಿದೆ. ಮತ್ತೊಮ್ಮೆ ಬಂದಾಗ ಅದನ್ನು ನಾನು ತೆರೆದು, ಹಣ ಇರುವುದನ್ನು ಖಚಿತಪಡಿಸಿಕೊಂಡೆ."

"ಹೌದು. ನಾನು ಸೂಕ್ತ ಜಾಗ ಹುಡುಕುತ್ತಾ ಬಂದು ಆ ಮನೆಯನ್ನ ನೋಡ್ದೆ. ಪಾಳು ಬಿದ್ದಂತಿತ್ತು. ಆ ಮುಚ್ಚಿಗೆಯ ಹಲಗೆ ಕತ್ತರಿಸಿ, ಹಣ ಅಡಗಿಸಿಟ್ಟು, ಮುತ್ತಪ್ಪನಿಗೆ ಹಣದ ಆಸೆ ತೋರಿಸಿ, ಬಾಡಿಗೆಗೆ ಪಡೆದುಕೊಂಡೆ. ಅವ್ನಿಗೆ ಹತ್ತು ಸಾವಿರ ಕೊಟ್ಟಿದ್ದೆ. ಅವ್ನು ಮೂವತ್ತು ಕೇಳ್ತಿದ್ದ. ಹಣ ಹುಡುಕೋಕೆ ಅವ್ನು ಮನೆಯೊಳಗೆ ಬಂದಿದ್ದೂ ನನ್ಗೆ ಗೊತ್ತಾಗಿತ್ತು."

"ರಾಣೆ, ಇವರಿಬ್ಬರನ್ನೂ ಬಂಧಿಸಿ, ಹಣ ವಶ ಮಾಡಿಕೊಳ್ಳಿ. ಹಾಗೇ ಆ ಜೇಮ್ಸ್ ಕುಟ್ಟಿಯನ್ನೂ ಬಂಧಿಸಿ."

ಅವರಿಬ್ಬರನ್ನೂ ನಾವು ರಾಣೆಯ ವಶ ಒಪ್ಪಿಸಿ, ವಾಪಸು ಹೊರಟೆವು.

"ಒಂದು ಪ್ರಶ್ನೆ ಹಾಗೆಯೇ ಉಳಿಯಿತು. ಹೊನ್ನರಾಜು ಮುತ್ತಪ್ಪನಿಗೆ ಹೆದರುತ್ತಿದ್ದುದು ಏಕೆ?" ಮನ ಕೊರೆಯುತ್ತಿದ್ದ ಪ್ರಶ್ನೆ ಕೇಳಿದೆ.

"ಬಹುಶಃ ತನ್ನ ಅಣ್ಣನ ಕೊಲೆ ಹೊನ್ನರಾಜು ಮಾಡಿದ್ದಾನೆ. ಅದನ್ನು ಮುತ್ತಪ್ಪ ನೋಡಿರಬೇಕು. ಅದೇನೇ ಇದ್ದರೂ, ಅದು ಈ ಪ್ರಕರಣದ ವ್ಯಾಪ್ತಿಯೊಳಗೆ ಬರದು. ಅಲ್ವೇ?"

## ರವಿರಾಜ ಬೈಕಂಪಾಡಿ

ಮಂಗಳೂರಿನಲ್ಲಿ ಲೆಕ್ಕಪರಿಶೋಧಕರಾಗಿರುವ ರವಿರಾಜ ಅವರ ಮೊದಲ ಪತ್ತೆದಾರಿ ಕತೆ 'ಭವಿಷ್ಯ' ಪ್ರಕಟವಾಗಿದ್ದು 'ಸುಧಾ' ವಾರಪತ್ರಿಕೆಯಲ್ಲಿ. ಪತ್ರಿಕೆಗಳಲ್ಲಿ ಸುಮಾರು ನಲವತ್ತಕ್ಕೂ ಹೆಚ್ಚು ಕತೆಗಳು ಪ್ರಕಟಗೊಂಡಿವೆ. ಪತ್ತೆದಾರಿ ಕಿರು ಕಾದಂಬರಿ 'ಅದಲು–ಬದಲು' ವಾರಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ನೀಳ್ಗತೆಗಳೂ ಬೆಳಕು ಕಂಡಿವೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ವಾಸವಾಗಿದ್ದಾರೆ.